## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 912
ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್
(ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 21.09.2022.
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ, ಪೂರ್ವ ತಾಲ್ಲೂಕು, ವರ್ತೂರು ಹೋಬಳಿ ವ್ಯಾಪ್ತಿಯಲ್ಲಿ ಬರುವ ಅಮಾನಿ ಕೆರೆಯ ಒಟ್ಟು ವಿಸ್ತೀರ್ಣವೆಷ್ಟು; 1904ರ ಸರ್ವೆ ಪ್ರಕಾರ ಸದರಿ ಕೆರೆಯ ವಿಸ್ತೀರ್ಣ ಎಷ್ಟಿತ್ತು; ಪ್ರಸ್ತುತ ವಿಸ್ತೀರ್ಣ ಎಷ್ಟಿದೆ; | ಬೆಂಗಳೂರು ನಗರ ಜಿಲ್ಲೆ, ಪೂರ್ವ ತಾಲ್ಲೂಕು, ವರ್ತೂರು ಹೋಬಳಿ ವ್ಯಾಪ್ತಿಯಲ್ಲಿ ಬರುವ ಅಮಾನಿ ಕೆರೆ 1904ರ ಸರ್ವೆ ಪ್ರಕಾರ ಸದರಿ ಕೆರೆಯ ವಿಸ್ತೀರ್ಣ 445-14 ಎಕರೆ/ಗುಂಟೆ ಪ್ರಸ್ತುತ ಕೆರೆಯ ವಿಸ್ತೀರ್ಣ439-34 ಎಕರೆ/ಗುಂಟೆ ಇರುತ್ತದೆ. |
| ಆ) | ಸದರಿ ಜಾಗದಲ್ಲಿ ಅನಧಿಕೃತವಾಗಿ ಅತಿಕ್ರಮಿಸಿರುವ ಯಾವುದಾದರೂ ಪ್ರಕರಣಗಳು ಇದೆಯೇ; (ಇದ್ದರೆ, ಸದರಿ ಪ್ರಕರಣಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | 2015 ನೇ ಸಾಲಿನ ಕೆರೆ ಅಳತೆಯ ಸಮಯದಲ್ಲಿ 9-35 ಎಕರೆ/ಗುಂಟೆ ಇರುತ್ತದೆ. ಪ್ರಸ್ತುತ ಒತ್ತುವರಿಯನ್ನು ಖುಲ್ಲಾ ಪಡಿಸಲಾಗಿದ್ದು ಪ್ರಸ್ತುತ ಯಾವುದೇ ಒತ್ತುವರಿ ಆಗಿರುವುದಿಲ್ಲ. |
| ಇ) | ಸದರಿ ಪ್ರಕರಣಗಳ ಕುರಿತು ನ್ಯಾಯಾಲಯದಲ್ಲಿ ದಾವೆಗಳನ್ನು ಸಲ್ಲಿಸಲಾಗಿದೆಯೇ; (ಸಲ್ಲಿಸಿದ್ದಲ್ಲಿ, ಸದರಿ ಪ್ರಕರಣಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಸದರಿ ಕೆರೆ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 6961/2020 ರಂತೆ ಆಯುಕ್ತರು, ಬಿ.ಬಿ.ಎಂ.ಪಿ ಆಯುಕ್ತರು ಬಿ.ಡಿ.ಎ ಮತ್ತು ಬಿಡಬ್ಲ್ಯೂ.ಎಸ್.ಎಸ್.ಬಿ ರವರು ಪಾರ್ಟಿಗಳಾಗಿರುತ್ತಾರೆ. ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ನಂ.413/2022 ರಂತೆ ಪ್ರಕರಣ ದಾಖಲಾಗಿ ವಿಚಾರಣೆ ಹಂತದಲ್ಲಿ ಬಾಕಿ ಇರುತ್ತದೆ. |

ಸಂಖ್ಯೆ: ಆರ್‌ಡಿ 222 ಎಲ್‌ಜಿಕ್ಯೂ 2022 (ಇ)

(ಆರ್.ಅಶೋಕ)
ಕಂದಾಯ ಸಚಿವರು